**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ:** 1038/2020 **CW**-3 **PW**-3

**ಸಾಕ್ಷಿಯನ್ನು ದಿಃ 23.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಹೆಸರುಃ ಪವನ್

ತಂದೆಯ ಹೆಸರುಃ ಪುಟ್ಟರಾಜು

ವಯಸ್ಸುಃ 26 ವರ್ಷ

ವೃತ್ತಿಃ ಖಾಸಗಿ ಕೆಲಸ

ವಾಸ ಸ್ಥಳಃ ಚನ್ನರಾಯಪಟ್ಟಣ

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ನನ್ನ ಚಿಕ್ಕಮ್ಮ. ಚಾಸಾ-2 ನನ್ನ ತಂಗಿ. ಆರೋಪಿ 1 ಮತ್ತು 2 ನನ್ನ ಪಕ್ಕದ ಮನೆಯವರು.

ದಿಃ 02.10.2020 ರಂದು ರಾತ್ರಿ 9.30 ರ ಸಮಯದಲ್ಲಿ ಆರೋಪಿ 1 ಮತ್ತು 2 ರವರು ವಿದ್ಯಾನಗರದ ನಮ್ಮ ಮನೆಯ ಬಳಿ ಬಂದು ಮಳೆ ನೀರು ಹೋಗದ ಕಾರಣ ಕಾಂಪೌಂಡಿಗೆ ತೂತು ಮಾಡಿದ ವಿಚಾರವಾಗಿ ಚಾಸಾ-1 ಮತ್ತು ಆರೋಪಿಗಳ ನಡುವೆ ಜಗಳ ಆಗುತ್ತಿದ್ದು, 1ನೇ ಆರೋಪಿ ಹಾರೆಯಲ್ಲಿ ಚಾಸಾ-1 ರವರಿಗೆ ಹಲ್ಲೆ ಮಾಡಲು ಪ್ರಯತ್ನಿಸಿದಾಗ ನಾನು ತಪ್ಪಿಸಲು ಅಡ್ಡ ಹೋದಾಗ ಏಟು ನನ್ನ ಬಲಗೈಗೆ ಬಿದ್ದಿರುತ್ತದೆ. 1 ಮತುತ 2ನೇ ಆರೋಪಿ ಚಾಸಾ-1 ರವರನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಮತ್ತು ಚಾಸಾ-1 ರವರು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿರುತ್ತೇವೆ. ಈ ಸಂಬಂಧ ನಾನು ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಭಾಗಶಃ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

2ನೇ ಆರೋಪಿ ಚಾಸಾ-1 ರವರ ಕೂದಲನ್ನು ಎಳೆದಾಡಿ ಕೈಗಳಿಂದ ಮೈಮೇಲೆ ಹೊಡೆದಿರುತ್ತಾರೆ ಎಂದರೆ ಸರಿ. 1ನೇ ಆರೋಪಿ ಚಾಸಾ-1 ರವರ ಚೂಡಿದಾರವನ್ನು ಹಿಡಿದು ಎಳೆದಾಡಿ ಹರಿದಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನು ಮತ್ತು ಚಾಸಾ-2 ರವರು ಗಲಾಟೆ ಬಿಡಿಸಿರುತ್ತೇವೆ ಎಂದರೆ ಸರಿ. ಸಾಕ್ಷಿ ಮು.ಮಾ.2 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಆರ್ ವಿ ರವರಿಂದ ಃ**

ನಮ್ಮ ಊರು ದುದ್ದ ಗ್ರಾಮ. ಸುಮಾರು 20 ವರ್ಷದಿಂದ ಚನ್ನರಾಯಪಟ್ಟಣದಲ್ಲಿ ವಾಸವಿದ್ದೇವೆ. ಹೇಳಿಕೆಯಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ದಿಃ 02.10.2020 ರಂದು ಹೇಳಿಕೆ ನೀಡಿರುತ್ತೇನೆ. ನಮ್ಮ ಮನೆಗೂ ಚಾಸಾ-1 ರವರ ಮನೆಗೂ 200 ಮೀ. ಅಂತರವಿದೆ. ನಾನು ಸಾಮಾನ್ಯವಾಗಿ ಚಾಸಾ-1 ರವರ ಮನೆಗೆ ಹೋಗಿ ಬಂದು ಮಾಡುತ್ತೇನೆ. ಚಾಸಾ-1 ಮತ್ತು ಆರೋಪಿತರ ನಡುವೆ ಕಾಪೌಂಡ್ ಮತ್ತು ಮನೆ ಸಂಬಂಧ ಸಿವಿಲ್ ದಾವೆ ಇದೆ ಎಂದರೆ ಸರಿ. ಆರೋಪಿತರ ಮನೆ ಮತ್ತು ಚಾಸಾ-1 ರವರ ಮನೆಗಳ ನಡುವೆ ಒಂದು ಆರೋಪಿ ಕಾಂಪೌಡ್ ಗೋಡೆ ಇದೆ ಎಂದರೆ ಸರಿ. ಅದು 4 ಅಡಿ ಎತ್ತರವಿದೆ. ಸದರಿ ಕಾಂಪೌಂಡ್ ಗೋಡೆಗೆ ಚಾಸಾ-1 ರವರು ಹಾರೆಯಿಂದ ತೂತು ಮಾಡಿದ್ದರು ಎಂದರೆ ಸರಿ. ಸದರಿ ಕಾಂಪೌಂಡ್ ಗೋಡೆಗೆ ಯಾವುದೇ ರೀತಿಯ ಹಾನಿ ಮಾಡಬಾರದೆಂದು ಆರೋಪಿತರು ಅರ್ಜಿ ಸಲ್ಲಿಸಿದ ಬಗ್ಗೆ ಗೊತ್ತಿಲ್ಲ.

ಕಾಂಪೌಂಡ್ ಯಾವ ದಿಕ್ಕಿಗೆ ಬರುತ್ತದೆ ಎಂದು ಹೇಳಲಾಗುವುದಿಲ್ಲ. ಕಾಂಪೌಂಡ್ ನಿಂದ ಯಾವ ದಿಕ್ಕಿಗೆ ಗಲಾಟೆ ಆಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಆರೋಪಿತರು ಎದುರು ದಿಕ್ಕಿನಲ್ಲಿರುವ ರಸ್ತೆಯಿಂದ ಬಂದಿರುತ್ತಾರೆ. ಈ ಅಂಶವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಚಾಸಾ-1

ರವರೇ ಮನೆಯ ಮೇಲೆ ಹಾರೆ, ಪಿಕಾಸಿ ಸಲಕರಣವನ್ನು ಇಟ್ಟುಕೊಂಡಿದ್ದಾರೆ ಎಂದರೆ ಸರಿ. ಮು.ಮಾ 1 ನ್ನು ಕೆಲಸದವರು ಇಟ್ಟುಕೊಂಡಿದ್ದರು ಎಂದರೆ ಗೊತ್ತಿಲ್ಲ. ಕೆಲಸದವರು ಇಟ್ಟುಕೊಂಡಿದ್ದ ಮು ಮಾ. 1 ರಿಂದ ಆರೋಪಿತರು ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಾರೆ ಎಂದರೆ ಸರಿಯಲ್ಲ.ನನ್ನ ಬಲಗೈನ ಹೆಬ್ಬೆರಳಿಗೆ ಪೆಟ್ಟಾಗಿರುತ್ತದೆ ಹೆಬ್ಬೆರಳಿಗೆ ಎಂಬ ಅಂಶವನ್ನು ನಾನು ಪೋಲೀಸರಿಗೆ ಹೇಳಿಲ್ಲ. ಈ ರೀತಿ ಹೇಳಲು ಯಾವುದೇ ತೊಂದರೆ ಇರಲಿಲ್ಲ. ಬೈಕಿನಲ್ಲಿ ಆಸ್ಪತ್ರೆಗೆ ಹೋಗಿರುತ್ತೇನೆ. ಹೆಬ್ಬೆರಳಿಗೆ ಗಾಯವಾಗಿ ರಕ್ತ ಬಂದಿರುತ್ತದೆ. ಆದರೆ ಬಟ್ಟೆಗೆ ಆಗಿರುವುದಿಲ್ಲ. ಆಸ್ಪತ್ರೆಯಲ್ಲಿ ವೈದ್ಯರಿಗೆ ಹಾರೆಯಿಂದಲೇ ಪೆಟ್ಟಾಗಿದೆ ಎಂದು ಹೇಳಿರುತ್ತೇನೆ. ಆದರೆ ಯಾರು ಎಂದು ಹೇಳಿರುವುದಿಲ್ಲ. ಆರೋಪಿತರು ಚಾಸಾ–1 ರವರ ಮೇಲೆ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಸಿವಿಲ್ದಾವೆಗೆ ಅನುಕೂಲ ವಾಗಲಿ ಎಂದು ಚಾಸಾ–1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ–1 ರವರು ಧರಿಸಿದ್ದ ಚೂಡಿದಾರವನ್ನು ಹರಿದಿದ್ದರು ಎಂದರೆ ಗೊತ್ತಿಲ್ಲ. ಚೂಡಿದಾರದ ಯಾವ ಭಾಗ ಹರಿದಿರುತ್ತದೆ ಎಂದು ನೆನಪಿಲ್ಲ. ಪೋಲೀಸರಿಗೆ ಯಾವ ಭಾಗ ಹರಿದಿರುತ್ತದೆ ಎಂದು ಹೇಳಿದ್ದೇನೆ ಎಂಬುದು ನೆನಪಿಲ್ಲ. ಚಾಸಾ–1 ರವರು ನನ್ನ ಚಿಕ್ಕಮ್ಮ ಆಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರೋಪಿತರು ಚಾಸಾ–1 ಮತ್ತು ನನ್ನ ಮೇಲೆ ದೂರು ಸಲ್ಲಿಸಿರುತ್ತಾರೆ ಎಂದರೆ ಸರಿ. ನಾವುಗಳು ಆರೂಪಿಗಳ ಮೇಲೆ ಹಲ್ಲೆ ಮಾಡಿ ಅವರುಗಳ ಸುಳ್ಳು ದೂರು ನೀಡಿ ಈಗ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**